

# ಗಾಂಧಿನಗರ ಪೋಸ್ಟ್

■ ರಘು



## ಗ್ಲಾಮರಸ್ ರಾಧಿಕಾ

ನೀವು ಈವರೆಗೆ ಕಾಣದ ರಾಧಿಕಾ ಪಂಡಿತ್‌ರನ್ನು 'ಗಾನ ಬಜಾನಾ'ದಲ್ಲಿ ಕಾಣುತ್ತೀರಿ. ಹಾಗೆಂದದ್ದು ನಿರ್ದೇಶಕ ಪ್ರಶಾಂತ್ ರಾಜ್. 'ಗಾನ ಬಜಾನಾ'ವನ್ನು ಥಿಯೇಟರ್‌ಗಳ ಹೊಸ್ತಿಲಲ್ಲಿಟ್ಟುಕೊಂಡು ಪ್ರೇಕ್ಷಕರ ಎದೆಯ ಕದ ತಟ್ಟುತ್ತಿರುವ ಅವರಿಗೆ ರಾಧಿಕಾ ಪ್ರತಿಭೆಯ ಬಗ್ಗೆ ತುಂಬು ಭರವಸೆ. 'ಗಾನ ಬಜಾನಾ'ದ ಹೈಲೈಟ್‌ಗಳಲ್ಲಿ ರಾಧಿಕಾ ಅಭಿನಯ ಕೂಡ ಒಂದೆನ್ನುವುದು ಅವರ ಅನಿಸಿಕೆ.

'ಈವರೆಗಿನ ಯಾವ ಚಿತ್ರಗಳಲ್ಲೂ ಕಾಣಿಸಿಕೊಳ್ಳದಷ್ಟು ಗ್ಲಾಮರಸ್ಸಾಗಿ 'ಗಾನಬಜಾನಾ'ದಲ್ಲಿ ರಾಧಿಕಾ ಕಾಣಿಸಿಕೊಂಡಿದ್ದಾರೆ. ಅವರಿಗೆಂದೇ ವಿಶೇಷ ಉಡುಪುಗಳನ್ನು ವಿನ್ಯಾಸಗೊಳಿಸಲಾಗಿದೆ. ಉಳಿದಂತೆ ದಿಲೀಪ್ ಹಾಗೂ ತರುಣ್ ಕೂಡ ಭಿನ್ನ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ' ಎಂದು ತಮ್ಮ ಬಳಗವನ್ನು ಪ್ರಶಾಂತ್ ಪ್ರಶಂಸಿಸುತ್ತಾರೆ.

ಪ್ರಶಾಂತ್ ಚೊಚ್ಚಿಲ ನಿರ್ದೇಶನದ 'ಲವ್ ಗುರು' ಚಿತ್ರದಲ್ಲಿನ ಅಭಿನಯಕ್ಕಾಗಿ ರಾಧಿಕಾಗೆ ಫಿಲಂಫೇರ್ ಪ್ರಶಸ್ತಿ ಸಂದಿತ್ತು. ಈ ಚಿತ್ರ ತೆಲುಗು, ಮಲೆಯಾಳಂ, ತಮಿಳುಗಳಿಗೆ ಡಬ್ ಕೂಡ ಆಗಿದೆ. ಹಾಗಾಗಿಯೇ 'ಗಾನಬಜಾನಾ'ದ ಬಗ್ಗೆ ನಿರೀಕ್ಷೆಗಳು ಹೆಚ್ಚಿವೆ. 'ಲವ್ ಗುರುವಿಗಿಂತಲೂ ತಮ್ಮ ಎರಡನೇ ಚಿತ್ರ ಎಲ್ಲ ರೀತಿಯಲ್ಲೂ ಉತ್ತಮವಾಗಿದೆ' ಎನ್ನುವುದು ಪ್ರಶಾಂತ್ ವಿಶ್ವಾಸದ ಮಾತು.



## ಹೃದಯಗಳ ಕಲರವ

ವಂದನಾ ಗುಪ್ತಾ, ಮೋನಿಕಾ ಹಾಗೂ ರೂಪಾಲಿ. ಮೂವರು ನಾಯಕಿಯರಿಗೆ ಒಬ್ಬನೇ ನಾಯಕ, ರಾಹುಲ್! ಇದು 'ಹೃದಯದಲಿ ಇದೇನಿದು' ಚಿತ್ರದ ಕೆಮಿಸ್ಟ್ರಿ. ಹದಿನಾರಾಣೆ ಪ್ರೇಮಕಥೆಯಾದ ಈ ಚಿತ್ರ ನಾಯಕಿಯರ ಚೆಲುವನ್ನೇ ಹೆಚ್ಚು ನೆಚ್ಚಿಕೊಂಡಂತಿದೆ. ಕಳೆದ ವಾರ ನಡೆದ ಸುದ್ದಿಗೋಷ್ಠಿಯಲ್ಲಿ ಎದ್ದು ಕಾಣುತ್ತಿದ್ದುದು ಈ ಚೆಲುವೆಯರೇ.

'ಹೃದಯದಲಿ ಇದೇನಿದು' ಶಿವನ್ ನಿರ್ದೇಶನದ, ದರ್ಶನ್ ಪ್ರಿಯ ನಿರ್ಮಾಣದ ಚಿತ್ರ. ಸೆಟ್ಟೇರಿ ಎರಡು ವರ್ಷಗಳು ಭರ್ತಿಯಾದ ನಂತರ ಸಿನಿಮಾ ತೆರೆ ಕಾಣುತ್ತಿದೆ. ತಡವಾದದ್ದು ಒಳ್ಳೆಯದಕ್ಕೆ ಎನ್ನುವಂತಿಲ್ಲ. 'ಹೃದಯದಲಿ ಇದೇನಿದು' ತೆರೆ ಕಾಣುತ್ತಿರುವುದು ಸುನಾಮಿ ಆತಂಕದ ಸಂದರ್ಭದಲ್ಲಿ. ರಜನಿಕಾಂತ್‌ರ ಬಹು ನಿರೀಕ್ಷೆಯ 'ಎಂದಿರನ್' ತೆರೆ ಕಾಣುತ್ತಿರುವ (ಅ. 1) ಸಂದರ್ಭದಲ್ಲೇ ಈ ಚಿತ್ರ ಪ್ರೇಕ್ಷಕರ ಮುಂದೆ ಬರುತ್ತಿದೆ. ಪ್ರವಾಹದ ಅಬ್ಬರದಲ್ಲಿ 'ನಮ್ಮ ಹೃದಯ' ಉಳಿಯುತ್ತದಾ ಎನ್ನುವುದು ತಂಡದ ಆತಂಕ.

## ತಾರೆಗಳ ತೋಟದಲ್ಲಿ ಶಶಾಂಕ್

ಬೌದ್ಧಿಕ ಸಂಪತ್ತಿನೊಂದಿಗೆ ದೇಹ ಶ್ರೀಮಂತಿಕೆ ಸೇರಿದರೆ ಏನಾಗುತ್ತದೆ? ಅದು ತಿಳಿಯಲು ಒಂದಷ್ಟು ಸಮಯ ಕಾಯಬೇಕು.

ವಿಷಯ ಇಷ್ಟು: ನಿರ್ದೇಶಕ ಶಶಾಂಕ್‌ರ ಹೊಸ ಚಿತ್ರವೊಂದರಲ್ಲಿ ವಿಜಯ್ ನಟಿಸುತ್ತಿದ್ದಾರೆ. ಹೇಳಿಕೇಳಿ, ವಿಜಯ್ ಹೊಡಿಕಡಿ ಚಿತ್ರಗಳಲ್ಲಿ ಪ್ರಸಿದ್ಧರಾದವರು. ಶಶಾಂಕ್ ಅವರದ್ದು ಮೊಗ್ಗಿನ ಮನಸುಗಳ ನವಿರು ಶೈಲಿ. ಬೆಳದಿಂಗಳಂಥ ಈ ನವಿರು ಶೈಲಿಯೂ, ಸಿಡಿಲಿನಂಥ ವಿಜಯ್ ಹುಮ್ಮಸ್ಸೂ ಚಿತ್ರವೊಂದರಲ್ಲಿ ಒಟ್ಟಾಗಲಿದೆ.

'ನವಿರು ಸಿನಿಮಾಗಳ ನಿರ್ದೇಶಕ ಎನ್ನುವ ನನ್ನ ಇಮೇಜ್ ಈ ಚಿತ್ರದಿಂದ ಬದಲಾಗಲಿದೆ. ವಿಜಯ್ ಇಮೇಜ್‌ಗೆ ತಕ್ಕಂತೆ ಕಥೆಯಿರುತ್ತದೆ. ಸಾಹಸದ ಜೊತೆಗೆ ನನ್ನ ಸಂವೇದನೆಗಳೂ ಚಿತ್ರದಲ್ಲಿರುತ್ತವೆ' ಎನ್ನುವುದು ಶಶಾಂಕ್ ಸ್ಪಷ್ಟನೆ. ಈ ಚಿತ್ರದಲ್ಲಿ ವಿಜಯ್‌ಗೆ ನಾಯಕಿಯಾಗಿ ಐಂದ್ರಿತಾ ನಟಿಸಬಹುದು. ಹಾಗಾದಲ್ಲಿ 'ಜಂಗ್ಲಿ' ಜೋಡಿ ಮತ್ತೆ ಒಂದಾಗಲಿದೆ. ಅಂದಹಾಗೆ, ಶಶಾಂಕ್‌ರ ಮತ್ತೊಂದು ಚಿತ್ರದಲ್ಲಿ ಸುದೀಪ್ ನಾಯಕರಾಗಿ ನಟಿಸುವುದು ಪಕ್ಕಾ ಆಗಿದೆ. ಅಲ್ಲಿಗೆ, ಶಶಾಂಕ್ ಎನ್ನುವ ಹೊಸ ಪ್ರತಿಭೆಗಳ ನೆಚ್ಚಿಕೊಂಡಿದ್ದ ನಿರ್ದೇಶಕರು ಜನಪ್ರಿಯ 'ತಾರೆಗಳ ತೋಟ' ಪ್ರವೇಶಿಸಿದಂತಾಯಿತು!

